ಕವಿತೆ




## ಪೂರ್ಣಿಮಾ ಸುರೇಶ್

ಕಲೆ: ಜಬೀವುಲ್ಲಾ ಎಂ. ಅಸದ್




# ಅಮ್ಮಬ್ರಹ್ಮ

ಮೂರು ದಿನ ಸ್ರಾವ
ಮಹಾಪತನ
ಬಿಡುಗಡೆಗೆ

ಮಾಸದ ಉಳಿದು ಹೋದ ದಿನಗಳಲಿ
ಚಟುವಟಿಕೆ
ಒಂದು ಚಲನೆ, ಚುಕ್ಕಿ,ಸ್ಪರ್ಶ
ಕಟ್ಟುವಿಕೆ ಮತ್ತೆ...
ಅವನಿ ತೃಷೆಯ
ಚೆಲ್ಲಿದೆ

ದಿನಗಳು, ವರುಷ,ಮಾಸ
ಒಂದು ಸವಿಗಾಗಿ ಮಾತ್ರ

ಕಾಯುವಿಕೆ ಅಂದರೆ ತಪ
ಮುಗಿಯುತು ಎಂದರೆ ಆರಂಭ

ನನಗೂ ಗೊತ್ತಿದೆ
'ಹೊರಗಾದವಳು'
ಒಳಗಿರುವ ಮೂರ್ತಿ ಪ್ರಕಟವಾಗಿಸದವಳು

ಇವರಿಗೆಲ್ಲ ಹೇಗೆ ಅರ್ಥವಾಗಬೇಕು ಹೇಳು
ಒಳಗಿರುವವನು ಬ್ರಹ್ಮ



# ಗುಪ್ತಗಾಮಿ

ಇವರು ಕೇವಲ ಕೆಡವಿದ ಭಾವ
ಪಾಯಸ ಉಂಡು
ಮುಟ್ಟಾದವಳು ಎನ್ನುವರು

ಕಣಕಣ ಆಹ್ವಾನಗೊಂಡು
ಕೋಶ ರಕ್ಷಣೆಯಾಗಿ

ಗೋಡೆಗಳು ಕೋಟೆಯಾಗಿ
ಮಂದಿರವಾಗಿ
ಕಾಯುತ್ತವೆ

ಬಿಂದು
ಕಾದು ಕಾದು
ಜರಿದು...
ಶ್ರದ್ಧೆಯ
ಉರುಳಾಟ

ಹಾ... ಮಹಾಸದ್ದು
ಯಾರಿಗೂ ಕೇಳಿಸಿಲ್ಲವೇ ಅಯ್ಯೋ!

ಕೆಸರಿನಲಿ ಸರಿದಿದೆ
ಉತ್ಸವದ ರಥ
ಚಕ್ರ
ಬಲಿ ಉತ್ಸವ ಮೂರು ಸುತ್ತು

ಮುಗಿಯಿತು ಇನ್ನು
ಗೋಡೆಗಳ ಕಟ್ಟಲಾಗದು
ನಮ್ಮನ್ನು ಪ್ರತ್ಯೇಕಿಸುವುದಿಲ್ಲ

ಕಣ್ಣಿದೆಯೇ...
ನೋಡು, ದೇವಾಲಯದ ಕಂಬಗಳು
ಎತ್ತರಕೆ ಬೆಳೆದು
ಎತ್ತಿ ಹಿಡಿದಿದೆ ಬಿಂಬ
ಮೇಲೆ... ಅಲ್ಲಿ